# ಕನ್ನಡ ಸಿನಿಮಾ 2020-2021

## ಹೀಗೊಂದು ಮಧ್ಯಂತರ, ಮುಂದೇನು?

2020 ಮನುಕುಲದ ಪಾಲಿಗೇ ಒಂದು ದುಃಸ್ವಪ್ನ. ‘ಕೋವಿಡ್ 19’ ಸೋಂಕು ತಂದಿತ್ತ ಸಂಕಷ್ಟಗಳಿಂದ ಇನ್ನೂ ನಾವು ಪೂರ್ತಿ ಹೊರಗೆ ಬಂದಿಲ್ಲ. ಅದರ ನೇರ ಇಲ್ಲವೇ ಪರೋಕ್ಷ ಪರಿಣಾಮಗಳಿಗೆ ಬಸವಳಿಯುತ್ತಲೇ ಇದ್ದೇವೆ. ಕನ್ನಡ ಚಿತ್ರರಂಗವೂ ಇದಕ್ಕೆ ಹೊರತಲ್ಲ. ನಾಲ್ಕು ತಿಂಗಳು ಸ್ಮಶಾನಮೌನ ಆವರಿಸಿದ್ದ ಚಿತ್ರರಂಗದಲ್ಲೀಗ ಮತ್ತೆ ಜೀವಸ್ವರ ಕೇಳಲಾರಂಭಿಸಿದೆ. ದೂಳು ಹಿಡಿದು ಮಸುಕಾಗಿದ್ದ ಬೆಳ್ಳಿತೆರೆಯೀಗ ಮತ್ತೆ ಕಣ್ಣು ಅರಳಿಸತೊಡಗಿದೆ. ಆದರೆ ತೆರೆದ ಚಿತ್ರಮಂದಿರಗಳ ಕಡೆಗೆ ಪ್ರೇಕ್ಷಕ ಕಣ್ಣುನೆಟ್ಟಾನೆಯೇ? ಕೊರೊನಾ ನಂತರ ತೆರೆಗೆ ಮುಗಿಬೀಳಲಿರುವ ನೂರಾರು ಸಿನಿಮಾಗಳು ಉಂಟುಮಾಡುವ ಪರಿಣಾಮಗಳೇನು? ಈ ಚಿತ್ರಸ್ಫೋಟ ಚಿತ್ರರಂಗದ ತುತ್ತಿನ ಚೀಲವಾಗುವುದೇ ಅಥವಾ ಒಡಲಿಗೆ ಕಟ್ಟಿಕೊಂಡ ಆತ್ಮಹತ್ಯಾ ಬಾಂಬ್ ಆಗುವುದೇ? ಎಲ್ಲವೂ ಊಹೆಗೆ ಮೀರಿಯೇ ಘಟಿಸುತ್ತಿರುವ ಈ ಸಂದರ್ಭದಲ್ಲಿ ಈಗಲೇ ಈ ಪ್ರಶ್ನೆಗಳಿಗೆಲ್ಲ ನಿಖರವಾಗಿ ಉತ್ತರಿಸುವುದು ಕಷ್ಟ. ಆದರೆ ಕೊರೊನಾ ನಂತರದ ದಿನಗಳಲ್ಲಿ ಬರೀ ಸಂಭ್ರಮವಷ್ಟೇ ಅಲ್ಲ, ಕಠಿಣ ಸವಾಲುಗಳೂ ಮುಖಾಮುಖಿಯಾಗಲು ಕಾದಿವೆ ಎನ್ನುವುದನ್ನಂತೂ ಹೇಳಬಹುದು? ಅಂಥ ಸಂಭಾವ್ಯ ಸವಾಲಿಗೆ ಚಿತ್ರರಂಗ ಸಿದ್ಧವಾಗಿದೆಯೇ? 2020ರ ಹೊರಳುನೋಟದ ಜೊತೆಗೆ ಮುಂದಿನ ದಾರಿಯ ಕಡೆಗೂ ದೃಷ್ಟಿಹಾಯಿಸುವ ಪ್ರಯತ್ನ ಈ ಅವಲೋಕನ.

■ ಪದ್ಮನಾಭ ಭಟ್

ಸ್ಯಾಂಡಲ್‌ವುಡ್ 20-21

### ತೆರೆದಿದೆ ಥಿಯೇಟರ್! ಎಲ್ಲಿರುವನು ಅತಿಥಿ?